**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .**

SC. No.165-2022

ದೋ.ಸಾ. 6
ಫ್ರಾ.ಸಾ. 5
ಪ್ರ.ವ.ಬೊ.ದಿನಾಂಕ. 19-09-2025

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಸುದೀಪ |
| ತಂದೆ / ಗಂಡನ ಹೆಸರು | - | ಶಾಂತಪ್ಪ |
| ವಯಸ್ಸು | - | 26 |
| ಉದ್ಯೋಗ | - | ಸಿವಿಲ್ ಎಂಜಿನಿಯರ್ |
| ವಾಸ ಸ್ಥಳ | - | ದಾವಣಗೆರೆ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನನಗೆ ಫ್ರಾ.ಸಾ.1 ಹಾಗೂ ಚಾ.ಸಾ.7 ರವರ ಪರಿಚಯ ಇರುತ್ತದೆ. ದಿಃ 27-10-2020 ರಂದು ಪೋಲೀಸರು ನನ್ನನ್ನು ಕೆಟಿಜೆ ನಗರ ಪೊಲೀಸ್ ಠಾಣೆಗೆ ಪಂಚನಾಮೆಗಾಗಿ ಕರೆಯಿಸಿದ್ದರು. ನಾನು ಠಾಣೆಗೆ ಹೋದಾಗ ಅಲ್ಲಿ ಫ್ರಾ.ಸಾ.1 ಮತ್ತು ಚಾ.ಸಾ.7 ರವರು ಕೂಡ ಇದ್ದರು. ಆ ಸಮಯದಲ್ಲಿ ಫ್ರಾ.ಸಾ.1 ರವರು ಒಂದು ಶರ್ಟ್ ಮತ್ತು ಒಂದು ಪ್ಯಾಂಟನ್ನು ಪೋಲೀಸರಿಗೆ ಹಾಜರುಪಡಿಸಿದ್ದು, ಪೋಲೀಸರು ಅದನ್ನು ಸ್ವಾಧೀನಕ್ಕೆ ಪಡೆದುಕೊಂಡಿರುತ್ತಾರೆ. ಅಲ್ಲದೇ ಅವುಗಳನ್ನು ಪ್ಯಾಕ್ ಮಾಡಿಕೊಂಡಿರುತ್ತಾರೆ. ನಾನು ನೋಡಿದ ಸಂದರ್ಭದಲ್ಲಿ ಸದರಿ ಬಟ್ಟೆಗಳಿಗೆ ರಕ್ತ ತಾಗಿರುತ್ತದೆ. ಸದರಿ ಬಟ್ಟೆಗಳನ್ನು ನಾನು ನೋಡಿದರೆ ಗುರುತಿಸುತ್ತೇನೆ. ಸದರಿ ಬಟ್ಟೆಗಳನ್ನು ಸಾಕ್ಷಿಯು ಗುರುತಿಸಿದ್ದು ಅವುಗಳು ಈಗಾಗಲೇ ಮು.ಮಾ.1 ಮತ್ತು 3 ಎಂದು ಗುರುತಿಸಲಾಗಿರುತ್ತದೆ. ಅಲ್ಲದೇ ಆ ಸಮಯದಲ್ಲಿ ಪೋಲೀಸರು ನಮ್ಮ ಪೋಟೋಗಳನ್ನು ಕೂಡ ತೆಗೆದಿರುತ್ತಾರೆ. ಸಾಕ್ಷಿಯು ನಿ.ಪಿ.3 ನ್ನು ನೋಡಿ ಗುರುತಿಸಿರುತ್ತಾರೆ. ಅಲ್ಲದೇ ನಿ.ಪಿ.2 ಹಾಗೂ ಇನ್ನೊಂದು ದಾಖಲೆಯಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕೂಡ ತಾನು ಆ ಸಮಯದಲ್ಲಿ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದು ನುಡಿದಿರುತ್ತಾರೆ. ಸದರಿ ಇನ್ನೊಂದು ದಾಖಲೆಯು ನೋಟೀಸು ಆಗಿದ್ದು, ಅದನ್ನು ನಿ.ಪಿ.13 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.13(ಎ) ಎಂದು ಗುರುತಿಸಲಾಯಿತು. ಅಲ್ಲದೇ ನಿ.ಪಿ.2 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ಅಲ್ಲದೇ ಮು.ಮಾ.2 ಮತ್ತು 4 ರ ಮೇಲೆ ಇರುವ ಸಾಕ್ಷಿಯ ಸಹಿಗಳನ್ನು ಮು.ಮಾ.2(ಬಿ) ಮತ್ತು 4(ಬಿ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ನನಗೆ ಫ್ರಾ.ಸಾ.1 ರವರು ಕಳೆದ 7 ರಿಂದ 8 ವರ್ಷದಿಂದ ಪರಿಚಯಸ್ಥರು. ಆ ದಿನ ಠಾಣೆಗೆ ಬರಲು ನನಗೆ ಫ್ರಾ.ಸಾ.1 ತಿಳಿಸಿದ್ದರು. ನಿ.ಪಿ.2 ರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ತಿಳಿದಿರುತ್ತದೆ. ಮು.ಮಾ.1 ರ ಹಿಂದುಗಡೆ ಹಾಗೂ ಬಲಭುಜದ ಬಳಿ ಹರಿದಿತ್ತು. ಅಲ್ಲದೇ ಸದರಿ ಮು.ಮಾ.1 ರ ಹಿಂದೆ ಹಾಗೂ ಭುಜದ ಬಳಿ ರಕ್ತದ ಕಲೆಗಳು ಇದ್ದವು. ನಿ.ಪಿ.2 ನ್ನು ಬರೆಯಲು ಫ್ರಾ.ಸಾ.1 ರವರು ಪೋಲೀಸರಿಗೆ ಮಾಹಿತಿ ನೀಡಿರುತ್ತಾರೆ. ಅದನ್ನು

ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿಯೇ ನೀಡಿರುತ್ತಾರೆ. ಸದರಿ ದಿನ ಫ್ರಾ.ಸಾ.1 ರವರು ಮು.ಮಾ.1 ಮತ್ತು 3 ನ್ನು ಠಾಣೆಗೆ ತಂದು ನೀಡಿದ್ದಾನೆ, ಅವುಗಳನ್ನು ಆ ದಿನ ನಾನು ನೋಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫ್ರಾ.ಸಾ.1 ನನ್ನ ಆತ್ಮೀಯ ಗೆಳೆಯನಾದ ಕಾರಣ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2025.09.19 14:54:44 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .</u>

SC. No.165-2022

ದೋ.ಸಾ. 4
ಫ್ರಾ.ಸಾ. 4
ಪ್ರ.ವ.ಬೊ.ದಿನಾಂಕ. 19-09-2025

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಕಾಶಿಪ್ |
| ತಂದೆ / ಗಂಡನ ಹೆಸರು | - | ಮೊಹಮ್ಮದ್ |
| ವಯಸ್ಸು | - | 27 |
| ಉದ್ಯೋಗ | - | ಖಾಸಗಿ ಉದ್ಯೋಗ |
| ವಾಸ ಸ್ಥಳ | - | ತೋಳಹುಣಸೆ, ದಾವಣಗೆರೆ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನನಗೆ ಚಾ.ಸಾ.5 ರವರ ಪರಿಚಯ ಇರುತ್ತದೆ. ಅದೇ ರೀತಿ ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯವು ಇರುತ್ತದೆ.

ದಿಃ 17-10-2020 ರಂದು ನನಗೆ ಕೆಟಿಜೆ ನಗರ ಪೊಲೀಸ್ ಠಾಣೆಯವರು ಠಾಣೆಗೆ ಬರಲು ತಿಳಿಸಿದ್ದು, ಆ ಪ್ರಕಾರ ನಾನು ಅಲ್ಲಿಗೆ ಹೋಗಿದ್ದು, ಅಲ್ಲಿ ಚಾ.ಸಾ.5 ರವರು ಕೂಡ ಬಂದಿದ್ದರು. ನಾವು ಠಾಣೆಗೆ ಹೋದಾಗ ಅಲ್ಲಿ ನಮಗೆ ಪೋಲೀಸರು ಆರೋಪಿತರನ್ನು ತೋರಿಸಿಕೊಟ್ಟಿರುತ್ತಾರೆ. ನಂತರ ಈ ಪ್ರಕರಣದ ವಿಷಯವನ್ನು ಆರೋಪಿತರು ನಮ್ಮ ಸಮಕ್ಷಮ ಹೇಳಿರುತ್ತಾರೆ. ನಂತರ ಪೋಲೀಸರ ಜೊತೆ ಆರೋಪಿತರು ಕೂಡ ಇದ್ದು, ನಮ್ಮನ್ನು ಮೊದಲಿಗೆ ಶಿವಪ್ಪ ಸರ್ಕಲ್ ಬಳಿ ಇರುವ ಎಸ್ ಎಸ್ ಸ್ಟೋರ್ ಎಂಬ ಅಂಗಡಿಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿ ಪೋಲೀಸರು ಆರೋಪಿತರನ್ನು ವಿಚಾರಿಸಿದಾಗ ಆರೋಪಿತರು ಇದೇ ಅಂಗಡಿಯಿಂದ ಚಾಕುವನ್ನು ಖರೀದಿಸಿರುವುದಾಗಿ ನುಡಿದಿರುತ್ತಾರೆ. ನಂತರ ಆರೋಪಿತರು ಅಲ್ಲಿ ತಾವು 45 ರೂಪಾಯಿ ನೀಡಿ ಚಾಕು ಖರೀದಿಸಿರುವುದಾಗಿ ಹೇಳಿರುತ್ತಾರೆ. ನಂತರ ಸ್ಥಳದಲ್ಲಿ ದಾಖಲೆ ಬರೆದು ನನ್ನ ಮತ್ತು ಚಾ.ಸಾ.5 ರವರ ಸಹಿ ಪಡೆದುಕೊಂಡಿರುತ್ತಾರೆ. ಸದರಿ ದಾಖಲೆಯು ದಿಃ 17-10-2020 ರ ಆರೋಪಿತರು ಚಾಕು ಖರೀದಿ ಮಾಡಿದ ಸ್ಥಳದ ಪಂಚನಾಮೆಯಾಗಿದ್ದು, ಅದನ್ನು ನಿ.ಪಿ.6 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.6(ಎ) ಎಂದು ಗುರುತಿಸಲಾಯಿತು. ಅಲ್ಲದೇ ಸಾಕ್ಷಿಯು ಕಡತದಲ್ಲಿ ಇರುವ ಎರಡು ಪೋಟೋಗಳನ್ನು ನೋಡಿ ಸದರಿ ಅಂಗಡಿಯನ್ನು ಅಲ್ಲದೇ ತಮ್ಮ ಇರುವಿಕೆಯನ್ನು ಗುರುತಿಸಿರುತ್ತಾರೆ. ಸದರಿ ಪೋಟೋಗಳನ್ನು ಕ್ರಮವಾಗಿ ನಿ.ಪಿ.7 ಮತ್ತು 8 ಎಂದು ಗುರುತಿಸಲಾಯಿತು.

ನಂತರ ಸ್ಥಳದಲ್ಲಿ ಮದ್ಯಾಹ್ನ 1-00 ಗಂಟೆಯಾಗಿದ್ದು, ನಂತರ ಆರೋಪಿತರು ಅಲ್ಲಿಂದ ನಮ್ಮನ್ನು ತ್ರಿಶೂಲ್ ಟಾಕೀಸಿನ ಗೇಟಿನ ಬಳಿ ಕರೆದುಕೊಂಡು ಹೋಗಿರುತ್ತಾರೆ. ಸದರಿ ಸ್ಥಳದ ಹತ್ತಿರದ ಒಂದು ಚರಂಡಿಯ ಪಕ್ಕದ ಗಿಡದಲ್ಲಿ ಇದ್ದ ಚಾಕುವನ್ನು 1 ನೇ ಆರೋಪಿಯು ತೋರಿಸಿಕೊಟ್ಟಿದ್ದು, ಅದನ್ನು ಪೋಲೀಸರು ವಶಕ್ಕೆ ಪಡೆದು ಸ್ಥಳದಲ್ಲಿ ದಾಖಲೆ ಬರೆದು ನಮ್ಮ ಸಹಿಗಳನ್ನು ಪಡೆದುಕೊಂಡು ಸ್ಥಳದಲ್ಲಿ ಪೋಟೋ ತೆಗೆದಿರುತ್ತಾರೆ. ಸದರಿ

ದಾಖಲೆಯು ದಿಃ 17-10-2020 ರಂದು ಬರೆಯಲಾದ ಅಮಾನತು ಪಂಚನಾಮೆಯಾಗಿದ್ದು, ಅದನ್ನು ನಿ.ಪಿ.9 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.9(ಎ) ಎಂದು ಗುರುತಿಸಲಾಯಿತು. ಅಲ್ಲದೇ ಎರಡು ಫೋಟೋಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿ.ಪಿ.10 ಮತ್ತು 11 ಎಂದು ಗುರುತಿಸಲಾಯಿತು.

ನಾನು ಸದರಿ ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಅದು ಈಗಾಗಲೇ ಮು.ಮಾ.5 ಎಂದು ಗುರುತಿಸಲಾಗಿದ್ದು, ಸಾಕ್ಷಿಯು ಅದನ್ನು ನೋಡಿ ಗುರುತಿಸಿರುತ್ತಾರೆ. ಆ ಸಮಯದಲ್ಲಿ ಪೋಲೀಸರು ಎರಡರಿಂದ ಮೂರು ದಾಖಲೆಗೆ ಸಹಿ ಪಡೆದುಕೊಂಡಿದ್ದು, ಈಗ ತೋರಿಸುತ್ತಿರುವ ದಾಖಲೆಗೂ ಕೂಡ ನಾನು ನಿ.ಪಿ.6 ಬರೆದ ಸ್ಥಳದಲ್ಲಿ ಸಹಿ ಮಾಡಿದ್ದು, ಸದರಿ ದಾಖಲೆಯು ನೋಟೀಸು ಆಗಿದ್ದು, ಅದನ್ನು ನಿ.ಪಿ.12 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.12(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ಫ್ರಾ.ಸಾ.1 ನನಗೆ ಗೆಳೆಯನಾಗಬೇಕು. ಚಾ.ಸಾ.5 ನನ್ನ ಗೆಳೆಯನಾಗಿದ್ದು, ಚಾ.ಸಾ.7 ರವರು ಫ್ರಾ.ಸಾ.1 ರವರ ಗೆಳೆಯ ಇರಬಹುದು. ನನ್ನ ಮನೆಯು ತೋಳಹುಣಸೆ ಗ್ರಾಮದಲ್ಲಿ ಇರುತ್ತದೆ. ನಾನು ಸಹಿ ಮಾಡಿದ್ದೇನೆ ಎಂದು ಹೇಳುವ ಸ್ಥಳದಿಂದ ನಮ್ಮ ಮನೆಗೆ ಸುಮಾರು 10 ಕಿಮೀ ಅಂತರವಿರುತ್ತದೆ. ನನಗೆ ಪೋಲೀಸರು ಬರುವಂತೆ ದೂರವಾಣಿ ಮಾಡಿದ ಬಳಿಕ ನೇರವಾಗಿ ನಾನು ಆ ದಿನ ಠಾಣೆಗೆ ಹೋಗಿರುತ್ತೇನೆ. ಫ್ರಾ.ಸಾ.1 ರವರು ಪೋಲೀಸರಿಗೆ ನನ್ನ ಕುರಿತು ಹೇಳಿದ್ದು, ನಂತರ ಪೋಲೀಸರು ನನ್ನ ನಂಬರ್ ಪಡೆದು ನನಗೆ ದೂರವಾಣಿ ಮಾಡಿರುತ್ತಾರೆ. ಅದೇ ರೀತಿ ಚಾ.ಸಾ.5 ರವರಿಗೂ ಕೂಡ ಪೋಲೀಸರು ನಂಬರ್ ಪಡೆದು ಬರಮಾಡಿಕೊಂಡಿರುತ್ತಾರೆ.

ಆ ದಿನ ನಾನು ಮತ್ತು ಚಾ.ಸಾ.5 ಜೊತೆಗೆ ಠಾಣೆಗೆ ಹೋಗಿರುತ್ತೇವೆ. ನಾನು ಸಹಿ ಮಾಡಿದ ಸ್ಥಳಗಳಲ್ಲಿಯೇ ಚಾ.ಸಾ.5 ರವರು ಕೂಡ ಸಹಿ ಮಾಡಿರುತ್ತಾರೆ. ನಾನು ಠಾಣೆಗೆ ಹೋದಾಗ 1 ನೇ ಆರೋಪಿಯ ಕೈಗೆ ಗಾಯ ಆಗಿರುವುದನ್ನು ನೋಡಿರುವುದಿಲ್ಲ. ನಿ.ಪಿ.6 ಮತ್ತು 9 ಕ್ಕೆ ಯಾರು ಮಾಹಿತಿ ಕೊಟ್ಟಿದ್ದಾರೆ ಎಂದು ನನಗೆ ತಿಳಿದಿಲ್ಲ. ಆದರೆ ಪೋಲೀಸರು ಬರೆದಿರುತ್ತಾರೆ. ನಾನು ಮತ್ತು ಚಾ.ಸಾ.5 ಸದರಿ ಪಂಚನಾಮೆಗಳಿಗೆ ಸಹಿ ಮಾಡಿದ್ದು ಹೊರತುಪಡಿಸಿ ಬೇರೆ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ತಿಳಿದಿರುವುದಿಲ್ಲ. ನಿ.ಪಿ.6 ಬರೆದ ಸ್ಥಳದ ಅಂಗಡಿಗೆ ಸಿಸಿ ಟಿವಿ ಅಳವಡಿಸಲಾಗಿತ್ತೋ ಇಲ್ಲವೋ ನನಗೆ ತಿಳಿದಿರುವುದಿಲ್ಲ. ಆ ಸಮಯದಲ್ಲಿ ಪೋಲೀಸರು ಸದರಿ ಅಂಗಡಿಯ ಮಾಲೀಕನ ಬಳಿ ಆರೋಪಿತರು ಚಾಕು ಖರೀದಿಸಿದ್ದಾರೆ ಎನ್ನುವ ಕುರಿತಾಗಿ ಇರುವ ಬಿಲ್ ಕೇಳಿದ ಬಗ್ಗೆ ನನಗೆ ತಿಳಿದಿರುವುದಿಲ್ಲ. ಪೋಲೀಸರು ಅಂಗಡಿಯ ಮಾಲೀಕನ ಬಳಿ ಏನು ಮಾತನಾಡಿಕೊಂಡಿದ್ದಾರೆ ಎಂದು ನನಗೆ ತಿಳಿದಿಲ್ಲ, ಯಾಕೆಂದರೆ ನಾನು ಅಂಗಡಿಯ ಹೊರಗೆ ನಿಂತಿದ್ದೆ. ನಾನು ಸಹಿ ಮಾಡಿದ ದಾಖಲೆಗಳನ್ನು ಪೋಲೀಸರು ಠಾಣೆಯಲ್ಲಿಯೇ ಬರೆದು ಸಹಿ ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ.

ನಾನು ಅಂಗಡಿಯ ಹೊರಗಡೆ ನಿಂತುಕೊಂಡಿರುವ ಕಾರಣ ಪೋಲೀಸರು ಮತ್ತು ಆರೋಪಿತರು ಅಂಗಡಿಯ ಮಾಲೀಕರಲ್ಲಿ ಏನು ಮಾತನಾಡಿಕೊಂಡಿದ್ದಾರೆ ಎಂದು ನನಗೆ ತಿಳಿದಿಲ್ಲ ಎಂದರೆ ಸರಿ. ಸದರಿ ಅಂಗಡಿಯ ಬಳಿ

ನಿ.ಪಿ.6 ಕ್ಕೆ ನಾನು ಸಹಿ ಮಾಡಿದ್ದು, ನಿ.ಪಿ.7 ಮತ್ತು 8 ರಂತೆ ಫೋಟೋ ಕೂಡ ತೆಗೆದಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಂಗಡಿಯ ಚೆಕ್ ಬಂದಿ ನನಗೆ ಹೇಳಲು ಸಾಧ್ಯವಿರುವುದಿಲ್ಲ. ನಾವು ಸದರಿ ನಿ.ಪಿ.6 ಕ್ಕೆ ಠಾಣೆಯಲ್ಲಿ ಸಹಿ ಮಾಡಿದ್ದರೂ ಕೂಡ ಸದರಿ ಅಂಗಡಿಯ ಬಳಿ ಸಹಿ ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಂತರ ನಮ್ಮನ್ನು ತ್ರಿಶೂಲ್ ಟಾಕೀಸಿನ ಬಳಿ ಕರೆದುಕೊಂಡು ಹೋಗಿದ್ದಾರೆ ಎಂದು ನಾನು ಮುಖ್ಯ ವಿಚಾರಣೆಯಲ್ಲಿ ನುಡಿದ್ದು, ಸದರಿ ಸ್ಥಳದಲ್ಲಿ ಮು.ಮಾ.5 ಚಾಕು ಯಾರಿಗೂ ಕಾಣದ ರೀತಿಯಲ್ಲಿ ಬಿದ್ದಿತ್ತು. ಮು.ಮಾ.5 ಕ್ಕೆ ರಕ್ತದ ಕಲೆಗಳು ಇದ್ದವೋ ಇಲ್ಲವೋ ನನಗೆ ತಿಳಿದಿರುವುದಿಲ್ಲ. ಆ ಸಮಯದಲ್ಲಿ ಪೋಲೀಸರು ವೀಡಿಯೋ ಮಾಡಿಕೊಂಡಿದ್ದಾರೋ ಇಲ್ಲವೋ ನನಗೆ ತಿಳಿದಿರುವುದಿಲ್ಲ. ಸದರಿ ಸ್ಥಳದಲ್ಲಿ 1 ನೇ ಆರೋಪಿಯು ತೋರಿಸಿದಂತೆ ಮು.ಮಾ.5 ನ್ನು ಸ್ವಾಧೀನಪಡಿಸಿಕೊಂಡು ನಿ.ಪಿ.9 ರಂತೆ ದಾಖಲೆ ತಯಾರಿಸಿ ನಂತರ ಫೋಟೋ ತೆಗೆದಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ.5 ರ ಮೇಲೆ ನನ್ನ ಸಹಿಯುಳ್ಳ ಚೀಟಿಯನ್ನು ಅಂಟಿಸಿದ್ದಾರೋ ಇಲ್ಲವೋ ನನಗೆ ತಿಳಿದಿರುವುದಿಲ್ಲ. ನಾನು ಗುರುತಿಸಿದ ಫೋಟೋಗಳನ್ನು ಈ ಪ್ರಕರಣಕ್ಕಾಗಿ ಸೃಷ್ಟಿಸಲಾಗಿದ್ದು, ಪ್ರಾ.ಸಾ.1 ನನ್ನ ಗೆಳೆಯನಾದ ಕಾರಣ ಆತನಿಗೆ ಸಹಾಯ ಮಾಡಲು ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.6 ಮತ್ತು ನಿ.ಪಿ.9 ನ್ನು ಠಾಣೆಯಲ್ಲಿಯೇ ತಯಾರಿಸಲಾಗಿದ್ದು, ಅವುಗಳಿಗೆ ನಾನು ಠಾಣೆಯಲ್ಲಿಯೇ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.9 ರ ಚೆಕ್ ಬಂದಿ ನನಗೆ ಹೇಳಲು ಸಾಧ್ಯವಿರುವುದಿಲ್ಲ.

ನನಗೆ ಮು.ಮಾ.5 ರ ಉದ್ದಳತೆ ತಿಳಿದಿಲ್ಲ ಎಂದರೆ ಸಾಕ್ಷಿಯು ಉದ್ದಳತೆ ತಿಳಿದಿಲ್ಲ, ಆದರೆ ಮು.ಮಾ.5 ರ ವಿನ್ಯಾಸ ನೋಡಿದ್ದು, ಅದೇ ಆಗಿದೆ ಎಂದು ನುಡಿದಿರುತ್ತಾರೆ. ಮು.ಮಾ.5 ರ ಹಿಡಿಕೆ ಹಳದಿ ಬಣ್ಣದ್ದು ಎಂದು ನಾನು ಸುಳ್ಳು ಹೇಳುತ್ತಿದ್ದು, ಅದು ಕ್ರೀಂ ಕಲರ್ ಆಗಿರುತ್ತದೆ ಎಂದರೆ ಸಾಕ್ಷಿಯು ಆ ದಿನ ನಾನು ನೋಡಿದ ಚಾಕು ಇದೇ ಆಗಿತ್ತು ಎಂದು ನುಡಿದಿರುತ್ತಾರೆ. ಆರೋಪಿತರು ಪೋಲೀಸರ ಸಮಕ್ಷಮ ನಾವು ಈ ಪ್ರಕರಣ ನಡೆಸಿದ್ದೇವೆ ಎಂದು ಹೇಳಿಕೊಂಡಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK
Digitally signed by PRAVEEN KUMAR RAGHAV NAIK
Date: 2025.09.19 14:55:06 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.